ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1145 (1331)
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	21.12.2018.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ನೈಸ್ ಸಂಸ್ಥೆ ನಿರ್ಮಿಸುತ್ತಿರುವ ಬೆಂಗಳೂರು- ಮೈಸೂರು ಕಾರಿಡಾರ್ ಯೋಜನೆಯು ಯಾವ ಹಂತದಲ್ಲಿದೆ ಇದುವರೆಗೆ ಎಷ್ಟು ಕಿ.ಮೀ ರಸ್ತೆಯನ್ನು ನಿರ್ಮಿಸಲಾಗಿದೆ, ಇದರಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಡಾಂಬರ್ ರಸ್ತೆ ಎಷ್ಟು ಕಿ.ಮೀ. ನಿರ್ಮಿಸಲಾಗಿದೆ.	ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಸೆಕ್ಷನ್-ಎ ಭಾಗದಲ್ಲಿ, ನ್ಯಾಯಾಲಯದಲ್ಲಿ ಭೂಸ್ವಾಧೀನ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣಗಳಿಗೆ ಒಳಪಡುವ ಕೆಲವೊಂದು ಮಿಸ್ಸಿಂಗ್ ಲಿಂಕ್ಸ್‌ಗಳನ್ನು ಹೊರತುಪಡಿಸಿ, 41 ಕಿಮೀ ಉದ್ದದ ಪೆರಿಫೆರಲ್ ರಸ್ತೆ, 9 ಕಿ.ಮೀ. ಉದ್ದದ ಲಿಂಕ್ ರಸ್ತೆ ಹಾಗೂ 5 ಕಿ.ಮೀ. ಉದ್ದದ ವೇಗದ ಹೆದ್ದಾರಿಗಳನ್ನು ಭಾಗಶಃ ನಿರ್ಮಿಸಲಾಗಿದೆ. ಈ ಪೈಕಿ 3.80 ಕಿ.ಮೀ. ಉದ್ದದ ಪೆರಿಫೆರಲ್ ರಸ್ತೆ ಹಾಗೂ 8.10 ಕಿ.ಮೀ. ಉದ್ದದ ಲಿಂಕ್ ರಸ್ತೆಗಳಲ್ಲಿ ಡಾಂಬರ್ ಮೇಲೆ ಕಾಂಕ್ರೀಟ್ ವೈಟ್ ಟಾಂಪಿಂಗ್ ಮಾಡಲಾಗಿದ್ದು, ಉಳಿದ ರಸ್ತೆಯ ಭಾಗಗಳನ್ನು ಡಾಂಬರು ರಸ್ತೆಯಾಗಿ ನಿರ್ಮಿಸಲಾಗಿದೆ.
(ಆ)	ನೈಸ್ ಸಂಸ್ಥೆಯೊಂದಿಗೆ ಮಾಡಿ ಕೊಂಡಿರುವ ಒಪ್ಪಂದದ ಪ್ರಕಾರ ರಸ್ತೆಯನ್ನು ಯಾವ ರೀತಿಯಾಗಿ ನಿರ್ಮಿಸಬೇಕಾಗಿತ್ತು. ಪ್ರಸ್ತುತ ಯಾವ ರೀತಿಯಾಗಿ ನಿರ್ಮಿಸಿದೆ; ರಸ್ತೆಯನ್ನು ಒಪ್ಪಂದದಂತೆ ನಿರ್ಮಿಸಲಾಗಿದೆಯೇ; ಇಲ್ಲವಾದಲ್ಲಿ ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ.	ನೈಸ್ ಸಂಸ್ಥೆಯೊಂದಿಗೆ ದಿನಾಂಕ 03-04-1997 ರಂದು ಮಾಡಿಕೊಂಡಿರುವ ಕ್ರಿಯಾ ಒಪ್ಪಂದದಂತೆ, ಎಲ್ಲಾ ಟೋಲ್ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ರಸ್ತೆಯಾಗಿ ನಿರ್ಮಿಸಬೇಕಾಗಿರುತ್ತದೆ. ಮೂಲತಃ ನಿರ್ಮಿಸಲಾದ ಎಲ್ಲಾ ರಸ್ತೆಗಳನ್ನು ಡಾಂಬರು ರಸ್ತೆಯಾಗಿ ನಿರ್ಮಿಸಿದ್ದು, ಅದರಲ್ಲಿ ಕೆಲ ಭಾಗದ ಡಾಂಬರು ರಸ್ತೆಗಳ ಮೇಲೆ ಸಿಮೆಂಟ್ ವೈಟ್ ಟಾಪಿಂಗ್ ಮಾಡಲಾಗಿದೆ. ಯೋಜನಾ ಸಂಸ್ಥೆಯು ಕ್ರಿಯಾ ಒಪ್ಪಂದದಂತೆ ಸೀಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಿಸದೇ ಇದ್ದುದರಿಂದ, ದಿನಾಂಕ 05-02-2016 ರಂದು, ಕ್ರಿಯಾ ಒಪ್ಪಂದದ ಅರ್ಟಿಕಲ್ 16.2 ರನ್ವಯ ಡಿಫಾಲ್ಟ್ ನೋಟೀಸು ನೀಡಿ 180 ದಿನಗಳೊಳಗೆ ಸರಿಪಡಿಸುವಂತೆ ಸೂಚಿಸಲಾಗಿತ್ತು. ಆದರೆ, ಯೋಜನಾ ಸಂಸ್ಥೆಯು ಸದರಿ ಡಿಫಾಲ್ಟ್ ನೋಟೀಸ್ ಅನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 12109-10:2016 ರಲ್ಲಿ ಪ್ರಶ್ನಿಸಿದ್ದು, ಘನ ನ್ಯಾಯಾಲಯವು ಸದರಿ ಡಿಫಾಲ್ಟ್ ನೋಟೀಸಿಗೆ ತಡೆಯಾಜ್ಞೆ ನೀಡಿರುತ್ತದೆ. ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

(ಇ)	ನೈಸ್ ಸಂಸ್ಥೆಯ ಕುರಿತು ಸದನ ಸಮಿತಿಯ ವರದಿಯನ್ನು ಯಾವಾಗ ಮಂಡಿಸಲಾಗುವುದು; ಈ ಕುರಿತು ಸರ್ಕಾರದ ನಿಲುವೇನು?	ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಲ್ಲಿ ನಡೆಸಿದ ಎನ್ನಲಾದ ಅಕ್ರಮಗಳ ಬಗ್ಗೆ ಕರ್ನಾಟಕ ವಿಧಾನ ಸಭೆಯ ಸದನ ಸಮಿತಿಯು ವಿಚಾರಣೆ ನಡೆಸಿ, ಡಿಸೆಂಬರ್ 2016 ರಲ್ಲಿ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಡಿಸೆಂಬರ್ 2016ರ ಚಳಿಗಾಲದ ಅಧಿವೇಶನದಲ್ಲೇ ವಿಧಾನ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ಸದನ ಸಮಿತಿಯು ಮಾಡಿರುವ ಶಿಫಾರಸ್ಸುಗಳು ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಹಂತದಲ್ಲಿವೆ.
(ಈ)	ನೈಸ್ ಸಂಸ್ಥೆಯೊಂದಿಗಿನ ಗುತ್ತಿಗೆ ರದ್ದುಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಸರ್ಕಾರದ ವತಿಯಿಂದ ನೈಸ್ ಸಂಸ್ಥೆಯ ಅಕ್ರಮಗಳ ವಿರುದ್ಧ ಇದುವರೆಗೆ ಎಷ್ಟು ಕೇಸ್‌ಗಳನ್ನು ದಾಖಲು ಮಾಡಲಾಗಿದೆ; ಪ್ರಸ್ತುತ ಅವು ಯಾವ ಹಂತದಲ್ಲಿದೆ?	ನೈಸ್ ಸಂಸ್ಥೆಯೊಂದಿಗಿನ ಗುತ್ತಿಗೆ ರದ್ದುಪಡಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಸರ್ಕಾರದಿಂದ ನೈಸ್ ಸಂಸ್ಥೆಯ ಅಕ್ರಮಗಳ ವಿರುದ್ಧ ಯಾವುದೇ ಪ್ರಕರಣ ದಾಖಲು ಮಾಡಿರುವುದಿಲ್ಲ. ಆದರೆ, ಕರ್ನಾಟಕ ಉಚ್ಚ ನ್ಯಾಯಾಯವು AIMO ಪ್ರಕರಣದಲ್ಲಿ ದಿನಾಂಕ 03-05-2005 ರಂದು ನೀಡಿದ ತೀರ್ಪಿನ ವಿರುದ್ಧ ಸರ್ಕಾರದಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಪೀಲು ದಾಖಲಿಸಿದ್ದು, ಸದರಿ ಸಿವಿಲ್ ಅಪೀಲಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 20-4-2006 ರಂದು ತೀರ್ಪು ನೀಡಿ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿರುತ್ತದೆ. ಇದಲ್ಲದೇ, ನೈಸ್ ಸಂಸ್ಥೆಯೇ ಕರ್ನಾಟಕ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳ ವಿರುದ್ಧ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ 20-4-2006ರ ಆದೇಶ ಪಾಲಿಸದೇ ಇರುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ನಿಂದನಾ ಅರ್ಜಿ ಸಂ. 144:2006 ಮತ್ತು ಸಂ. 96:2007 ಅನ್ನು ದಾಖಲಿಸಿದ್ದು, ಸದರಿ ನಿಂದನಾ ಅರ್ಜಿಗಳಲ್ಲಿ ಮಾತ್ರ, ನೈಸ್ ಸಂಸ್ಥೆಯು ಕ್ರಿಯಾ ಒಪ್ಪಂದದಂತೆ ಯೋಜನೆ ಅನುಷ್ಠಾನಗೊಳಿಸುತ್ತಿಲ್ಲವೆಂಬ ಬಗ್ಗೆ ಹಾಗೂ ಹೆಚ್ಚುವರಿ ಜಮೀನು ಸ್ವಾಧೀನಕ್ಕೆ ಪಡೆದಿರುವ ಬಗ್ಗೆ ಸರ್ಕಾರದ ಪರವಾಗಿ ಹೇಳಿಕೆ ದಾಖಲಿಸಲಾಗಿದೆ. ಈ ನಿಂದನಾ ಅರ್ಜಿ ಪ್ರಕರಣವು ಇನ್ನೂ ಬಾಕಿ ಇರುತ್ತದೆ.

ಸಂಖ್ಯೆ: ಲೋಇ 65 ಸಿಆರ್‌ಎಂ 2018

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು